
# ಭಾಗವತದ ಸಾರತತ್ತ್ವ

ಸ್ವಾಮಿ ರಂಗನಾಥಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)



### ಕೃಷ್ಣಾವತಾರ

ಈಗ *ಭಾಗವತ ಪ್ರಧಾನ* ಎಂದು ಕರೆಯಲ್ಪಟ್ಟ ಹತ್ತನೆಯ ಸ್ಕಂಧಕ್ಕೆ ಬರುತ್ತೇವೆ. ಇದರಲ್ಲಿ ಕೃಷ್ಣನ ಬಾಲಲೀಲೆ ಮತ್ತು ಅವನ ವೈವಿಧ್ಯಮಯ ಜೀವನದ ಸುಂದರ ಕಥನ ಬರುತ್ತದೆ. ದೇವಕೀ-ವಸುದೇವರ ಸುತನಾಗಿ ಮಥುರೆಯ ಕಂಸನ ಕಾರಾಗೃಹದಲ್ಲಿ ಅವನ ಜನನದೊಂದಿಗೆ ಈ ಭಾಗ ಪ್ರಾರಂಭವಾಗುತ್ತದೆ.

ಪರೀಕ್ಷಿತನು ಕೃಷ್ಣನ ಕಥೆಯನ್ನು ವಿವರವಾಗಿ ತಿಳಿಸುವಂತೆ ಶುಕನನ್ನು ಪ್ರಾರ್ಥಿಸುತ್ತಾನೆ. ಶುಕನು ಆಗಲಿ ಎನ್ನುತ್ತಾನೆ:

*ಏವಂ ನಿಶಮ್ಯ ಭೃಗುನಂದನ ಸಾಧುವಾದಂ*
*ವೈಯಾಸಿಕಿಃ ಸ ಭಗವಾನಥ ವಿಷ್ಣುರಾತಮ್ ।*
*ಪ್ರತ್ಯರ್ಚ್ಯ ಕೃಷ್ಣಚರಿತಂ ಕಲಿಕಲ್ಮಷಘ್ನಂ*
*ವ್ಯಾಹರ್ತುಮಾರಭತ ಭಾಗವತಪ್ರಧಾನಃ ॥*

*"ಈ ಉತ್ತಮ ಪ್ರಶ್ನೆಗಳನ್ನು ಕೇಳಿದ ಶ್ರೇಷ್ಠ ಭಕ್ತನಾದ ಶುಕನು ಪರೀಕ್ಷಿತನನ್ನು ಅಭಿನಂದಿಸಿ, ಕಲಿಯ ದುಷ್ಪ್ರಭಾವವನ್ನು ಹೋಗಲಾಡಿಸುವ ಸಾಮರ್ಥ್ಯವುಳ್ಳ ಕೃಷ್ಣಚರಿತೆಯನ್ನು ಹೇಳಲು ಪ್ರಾರಂಭಿಸಿದನು."*

ಕೃಷ್ಣಚರಿತೆಯು ಭಾಗವತ ಪ್ರಧಾನವಾದುದು, ಅಂದರೆ ಭಾಗವತದ ಸಾರಭೂತವಾದುದು ಮತ್ತು ಕಲಿಯ ದುಷ್ಪ್ರಭಾವವನ್ನು ನಾಶ ಮಾಡುವಂತಹುದು. ಈಗ ಶುಕನು ಕೃಷ್ಣನ ಬಾಲ್ಯವನ್ನು ವಿವರಿಸಲು ತೊಡಗುತ್ತಾನೆ. ತುಂಬ ತಾತ್ತ್ವಿಕ ಭಾವನೆಗಳು ಇದರಲ್ಲಿ ಬರುತ್ತವೆ. ಆ ದಿವ್ಯ ಶಿಶುವನ್ನು ಕಂಡ ತಂದೆಯು ಭಗವಂತನನ್ನು ಸ್ತುತಿಸತೊಡಗುತ್ತಾನೆ. ಅನಂತರ ತಾಯಿಯೂ ಸ್ತುತಿಸುತ್ತಾಳೆ. ಇದರಲ್ಲಿ ಬರುವ ಒಂದು ಸುಂದರ ಶ್ಲೋಕವನ್ನು ನಾನು ಇಲ್ಲಿ ಉದಾಹರಿಸುತ್ತೇನೆ:

*ಮರ್ತ್ಯೋ ಮೃತ್ಯುವ್ಯಾಲಭೀತಃ ಪಲಾಯನ್*
*ಲೋಕಾನ್ ಸರ್ವಾನ್ ನಿರ್ಭಯಂ ನಾಧ್ಯಗಚ್ಛತ್ ।*
*ತ್ವತ್ಪಾದಾಬ್ಜಂ ಪ್ರಾಪ್ಯ ಯದೃಚ್ಛಯಾದ್ಯ*
*ಸ್ವಸ್ಥಃ ಶೇತೇ ಮೃತ್ಯುರಸ್ಮಾದಪೈತಿ ॥*

*"ಮರ್ತ್ಯನು ಹುಟ್ಟಿದಂದಿನಿಂದಲೇ ಮೃತ್ಯುಸರ್ಪದ ಭಯದಿಂದ ಓಡುತ್ತಾನೆ, ಅನೇಕ ಲೋಕಗಳನ್ನು ಸುತ್ತುತ್ತಾನೆ. ಆದರೆ ಎಲ್ಲಿಯೂ ಅವನಿಗೆ ಕ್ಷೇಮವಿಲ್ಲ. ಒಂದು ವೇಳೆ ಅವನು ನಿನ್ನ ಪಾದಪದ್ಮದಲ್ಲಿ ಆಶ್ರಯವನ್ನು ಪಡೆದದ್ದೇ ಆದರೆ ನಿರ್ಭಯನಾಗಿರಬಹುದು. ಏಕೆಂದರೆ ಮೃತ್ಯುವು ನಿನ್ನ ಪಾದದ ಸಮೀಪಕ್ಕೂ ಬರಲಾರದು."*

ನಾವು ಸಾವಿನಿಂದ ಪಾರಾಗಲು ಬಯಸುತ್ತೇವೆ. ಅದಕ್ಕಾಗಿ ಉಣ್ಣುತ್ತೇವೆ, ಕುಡಿಯುತ್ತೇವೆ, ಶಿಕ್ಷಣ ಪಡೆಯುತ್ತೇವೆ. ಮದುವೆಯಾಗಿ ಸಂಸಾರ ಹೂಡುತ್ತೇವೆ, ಪುಣ್ಯಕರ್ಮ ಮಾಡುತ್ತೇವೆ. ಆದರೆ ಸಾವು ಯಾವಾಗಲೂ ನಮ್ಮ ಹಿಂದೆಯೇ ಹಾವಿನಂತೆ ಹರಿದುಕೊಂಡು ಬರುತ್ತದೆ. ಸ್ವರ್ಗದಲ್ಲಿಯೂ ಕೂಡ ಅವನಿಗೆ ಸುರಕ್ಷೆ ಇಲ್ಲ. ಆದರೆ ಒಂದು ವೇಳೆ ಶ್ರೀಕೃಷ್ಣನಲ್ಲಿ ಅವನಿಗೆ ಭಕ್ತಿಯುಂಟಾಗಿ ಅವನ ದಿವ್ಯಪಾದದಲ್ಲಿ ಆಶ್ರಯವನ್ನು ಪಡೆದರೆ, ಅವನು ಸುರಕ್ಷತೆಯನ್ನೂ ಶಾಂತಿಯನ್ನೂ ಅಭಯವನ್ನೂ ಪಡೆಯುತ್ತಾನೆ. ಅವನು ಅಮೃತತ್ವವನ್ನು ಪಡೆಯುವುದರಿಂದ ಅವನ ಪಾಲಿಗೆ ಮೃತ್ಯುವೆಂಬುದಿಲ್ಲ.

ಕೃಷ್ಣನ ಬಾಲ್ಯಕ್ಕೆ ಸಂಬಂಧಿಸಿದ ಕಥೆಗಳು ಶತಶತಮಾನಗಳಿಂದಲೂ ಭಾರತೀಯ ಮನಸ್ಸನ್ನು ಸೆರೆಹಿಡಿದಿವೆ. ಅಂತಹ ಒಂದು ಕಥೆ ಪೂತನಿಯದು. ಕಂಸನು ಅವಳನ್ನು ತನ್ನ ವಿಷ

ಸ್ತನ್ಯಪಾನ ಮಾಡಿಸಲು ಶಿಶು ಕೃಷ್ಣನೆಡೆಗೆ ಕಳಿಸುತ್ತಾನೆ. ಆದರೆ ಕೃಷ್ಣನು ಅವಳ ಸ್ತನ್ಯವನ್ನು ಹೀರುತ್ತ ಆಕೆಯ ಪ್ರಾಣವನ್ನೇ ಹೀರಿ ಅವಳನ್ನು ಸಾಯಿಸುತ್ತಾನೆ. ಹೀಗೆ ಕೃಷ್ಣನ ಕಥೆ ಮುಂದುವರಿಯುತ್ತದೆ. ಮುಖ್ಯ ಅಂಶವೆಂದರೆ ಕೃಷ್ಣನ ಅವತಾರ ಮಾನವನ ವೈಭವವನ್ನೂ ಸಾರುತ್ತದೆ. ದೇವರು ಮಾನವನಾಗಿ ಅವತರಿಸಿ ಮಾನವನನ್ನು ಉನ್ನತ ಮಟ್ಟಕ್ಕೆ ಏರಿಸುತ್ತಾನೆ. ಮಾನವರು ತಮ್ಮ ಆದರ್ಶಕ್ಕೆ ಬದ್ಧರಾಗಿ ಬಾಳಿದರೆ ದೇವತೆಗಳು ಅವರಿಗೆ ಯಾವ ತೊಂದರೆಯನ್ನೂ ನೀಡಲಾರರು. ದೇವತಾಧಿಪನಾದ ಇಂದ್ರನು ಕೃಷ್ಣನನ್ನು ವಂಚಿಸಲು ಪ್ರಯತ್ನಿಸುತ್ತಾನೆ. ಏಕೆಂದರೆ ಜನರು ಮಾಡುತ್ತಿದ್ದ ಇಂದ್ರಪೂಜೆಯನ್ನು ಅವನು ನಿಲ್ಲಿಸಿದನು. ಅದರ ಬದಲು ಗೋವರ್ಧನಗಿರಿಯನ್ನು ಪೂಜಿಸಿ, ಅವರಿಂದ ದೂರದ ಇಂದ್ರಾದಿ ದೇವತೆಗಳನ್ನು ಪೂಜಿಸುವುದಕ್ಕಿಂತ ಮಾನವಕೋಟಿಗೆ ಎಷ್ಟೋ ಪ್ರಯೋಜನವಾಗುತ್ತದೆ, ಎಂದು ಅವರಿಗೆ ಹೇಳಿದನು. ಇಂದ್ರನು ಕುಪಿತನಾಗಿ ಈ ಮಾನವ ಪ್ರತಿಭಟನೆಯ ಹುಟ್ಟಡಗಿಸಲು ಧಾರಾಕಾರ ಮಳೆ ಸುರಿಯುವಂತೆ ಮಾಡಿದನು. ಇದರಿಂದ ಜನರು ತುಂಬ ಕಷ್ಟಕ್ಕೀಡಾದರು. ಕೃಷ್ಣನು ಗೋವರ್ಧನಗಿರಿಯನ್ನು ತನ್ನ ಕಿರುಬೆರಳಿನಿಂದ ಎತ್ತಿ ಹಿಡಿದು ಅದರ ಕೆಳಗೆ ಜನರಿಗೆ ರಕ್ಷಣೆ ನೀಡಿದನು. ಕೃಷ್ಣನ ಅಸಾಧಾರಣ ಶಕ್ತಿಯನ್ನು ಗುರುತಿಸಿದ ಇಂದ್ರನು ಕೆಳಗಿಳಿದು ಬಂದು ಅವನ ಕ್ಷಮೆ ಯಾಚಿಸಿದನು. ಭಗವಂತನು ಮಾನವ ರೂಪದಲ್ಲಿ ಬರುವುದರ ಮೂಲಕ ಮಾನವನ ಘನತೆಯೂ ಶ್ರೇಷ್ಠತೆಯೂ ಉನ್ನತಿಗೇರುತ್ತವೆ.

ಸೃಷ್ಟಿಕರ್ತ ಬ್ರಹ್ಮನಿಗೂ ಹೀಗೆಯೇ ಆಯಿತು. ಅವನು ಗೋವುಗಳೂ ಗೋಪಗೋಪಿಯರೂ ಕಣ್ಮರೆಯಾಗುವಂತೆ ಮಾಡುವುದರ ಮೂಲಕ ಕೃಷ್ಣನನ್ನು ವಂಚಿಸಲು ಪ್ರಯತ್ನಿಸಿದನು. ಆದರೆ ಕೃಷ್ಣನು ಅವರೆಲ್ಲರನ್ನೂ ಪುನಃ ಸೃಷ್ಟಿಸಿದನು, ಜೀವನಕ್ರಮ ಎಂದಿನಂತೆ ಮುದುವರಿಯಿತು. ಬ್ರಹ್ಮನು ಕೃಷ್ಣನ ದಿವ್ಯಶಕ್ತಿಯನ್ನು ಗುರುತಿಸಿ ಅವನಿಗೆ ಶರಣಾದನು. ಈ ಕಥೆಗಳನ್ನೆಲ್ಲ ನಾನು ಉದಾಹರಿಸುತ್ತಿರುವುದಕ್ಕೆ ಕಾರಣ, ವೇದಾಂತದ ಬೋಧನೆಯಾದ ಮಾನವಜನ್ಮದ ಶ್ರೇಷ್ಠತೆ ಭಾಗವತದಲ್ಲೂ ಇದೆ ಎಂಬುದನ್ನು ಒತ್ತಿ ಹೇಳುವುದಕ್ಕಾಗಿ. ನಾನು ಕೃಷ್ಣನನ್ನು ಭಾರತೀಯ ಹೃದಯದ 'ಕಿಂದರಿಜೋಗಿ' ಎಂದು ಕರೆಯುತ್ತೇನೆ. ಕವಿಗಳು, ಕಲೆಗಾರರು, ತಾತ್ತ್ವಿಕರು, ರಾಜಕಾರಣಿಗಳು, ಪುರುಷರು, ಸ್ತ್ರೀಯರು, ಮಕ್ಕಳು, ಋಷಿಗಳು—ಎಲ್ಲರೂ ಕೃಷ್ಣನಿಂದ ಆಕರ್ಷಿತರಾದವರೇ. ಭಾರತೀಯ ಸಂಸ್ಕೃತಿಯ ಎಲ್ಲ ರೂಪಗಳ ಮೇಲೂ ಅವನ ಅದ್ಭುತ ಪ್ರಭಾವವಿದೆ. ಆದ್ದರಿಂದಲೇ ನಾವು ಅವನನ್ನು ಪೂರ್ಣಾವತಾರ ಎಂದು ಕರೆಯುತ್ತೇವೆ.

### ಶ್ರೀಕೃಷ್ಣನ ವೃಕ್ಷಸ್ತುತಿ

ಒಮ್ಮೆ ಕೃಷ್ಣನು ಹಸುಗಳನ್ನು ಮೇಯಿಸುತ್ತ ಗೋಪಬಾಲಕರೊಂದಿಗೆ ಬೃಂದಾವನದಿಂದ ಬಹುದೂರ ಹೋಗುತ್ತಾನೆ. ಆ ಪ್ರದೇಶವು ದಟ್ಟ ವೃಕ್ಷಗಳಿಂದ ಕೂಡಿದ್ದು ಅಸಂಖ್ಯ ಪ್ರಾಣಿಗಳಿಗೆ ತಂಪು ನೆರಳನ್ನು ನೀಡುತ್ತಿತ್ತು. ಗಾಳಿ, ಮಳೆ, ಬಿಸಿಲುಗಳ ಕಷ್ಟವನ್ನೆಲ್ಲ ಸಹಿಸಿಕೊಂಡು ಮರಗಳು ಸಲ್ಲಿಸುತ್ತಿದ್ದ ಸೇವೆಯನ್ನು ಕಂಡು ಕೃಷ್ಣನು ಅವುಗಳನ್ನು ತುಂಬ ಪ್ರಶಂಸಿಸುತ್ತಾನೆ.

**ನಿದಾಘಾರ್ಕಾತಪೇ ತಿಗ್ಮೇ ಛಾಯಾಭಿಃ ಸ್ವಾಭಿರಾತ್ಮನಃ ।**
**ಆತಪತ್ರಾಯಿತಾನ್ ವೀಕ್ಷ್ಯ ದ್ರುಮಾನಾಹ ವ್ರಜೌಕಸಃ ॥**

೧೦.೨೨.೩೦

"ವೃಕ್ಷಗಳು ಕೊಡೆಯಂತೆ ತಮ್ಮ ಕೊಂಬೆಗಳನ್ನು ಹರಡಿಕೊಂಡು ಎಲ್ಲರಿಗೂ ಬಿಸಿಲಿನ ಬೇಗೆಯನ್ನು ಪರಿಹರಿಸಿ ನೆರಳನ್ನು ಕೊಡುತ್ತಿರುವುದನ್ನು ಕಂಡು ಶ್ರೀಕೃಷ್ಣನು ಗೋಪಬಾಲಕರಿಗೆ ಹೇಳುತ್ತಾನೆ":

**ಪಶ್ಯತೈತಾನ್ ಮಹಾಭಾಗಾನ್ ಪರಾರ್ಥೈಕಾಂತಜೀವಿತಾನ್ ।**
**ವಾತವರ್ಷಾತಪಹಿಮಾನ್ ಸಹಂತೋ ವಾರಯಂತಿ ನಃ ॥**

೧೦.೨೨.೩೨

"ಸ್ನೇಹಿತರೇ, ಈ ಉದಾತ್ತ ವೃಕ್ಷಗಳನ್ನು ನೋಡಿ, ಇವು ಸಂಪೂರ್ಣ ಇತರರಿಗಾಗಿಯೇ ಜೀವಿಸುತ್ತಿರುವುವು. ಇವು ಗಾಳಿ ಮಳೆ ಬಿಸಿಲುಗಳನ್ನೆಲ್ಲ ಸಹಿಸಿಕೊಂಡು ನಮಗೆ ಅವುಗಳಿಂದ ರಕ್ಷಣೆ ನೀಡುತ್ತಿವೆ."

**ಅಹೋ ಏಷಾಂ ವರಂ ಜನ್ಮ ಸರ್ವಪ್ರಾಣ್ಯುಪಜೀವನಮ್ ।**
**ಸುಜನಸ್ಯೇವ ಯೇಷಾಂ ವೈ ವಿಮುಖಾ ಯಾಂತಿ ನಾರ್ಥಿನಃ ॥**

೧೦.೨೨.೩೩

"ತಮ್ಮೆಡೆಗೆ ಬಂದವರಿಗೆಲ್ಲ ಪೋಷಣೆಯನ್ನು ನೀಡುತ್ತಿರುವ ಇವುಗಳ ಜನ್ಮ ಎಂಥ ಸಾರ್ಥಕ! ಸಜ್ಜನರೆಡೆಗೆ ಹೋಗುವ ಸಹಾಯಾರ್ಥಿಗಳಂತೆ, ಇವುಗಳಿಂದ ಸಹಾಯ ಪಡೆಯಲು ಬರುವವರಾರೂ ನಿರಾಸೆಯಿಂದ ಹಿಂದಿರುಗಬೇಕಾಗಿಲ್ಲ."

**ಪತ್ರಪುಷ್ಪಫಲಚ್ಛಾಯಾ ಮೂಲವಲ್ಕಲ ದಾರುಭಿಃ ।**
**ಗಂಧನಿರ್ಯಾಸಭಸ್ಮಾಸ್ಥಿತೋಕ್ಮೈಃ ಕಾಮಾನ್ ವಿತನ್ವತೇ ॥**

೧೦.೨೨.೩೪

"ಇವು ತಮ್ಮ ಎಲೆ, ಹೂವು, ಹಣ್ಣು, ನೆರಳು, ಬೇರು, ತೊಗಟೆ, ಕಾಂಡ, ಗಂಧ, ಭಸ್ಮ, ಸೌದೆ ಮತ್ತು ಚಿಗುರು—ಇವುಗಳ ಮೂಲಕ ಜನರ ಮತ್ತು ಪ್ರಾಣಿಗಳ ಆವಶ್ಯಕತೆಗಳನ್ನು ಪೂರೈಸುತ್ತವೆ."

**ಏತಾವಜ್ಜನ್ಮಸಾಫಲ್ಯಂ ದೇಹಿನಾಮಿಹ ದೇಹಿಷು ।**
**ಪ್ರಾಣೈರರ್ಥೈರ್ಧಿಯಾ ವಾಚಾ ಶ್ರೇಯ ಏವಾಚರೇತ್ ಸದಾ॥**

೧೦.೨೨.೩೫

"ಮಾನವನ ಶಕ್ತಿಗಳು, ಸಂಪತ್ತು, ಬುದ್ಧಿ ಮತ್ತು ಮಾತು—ಇವು ಇತರರ ಒಳಿತಿಗಾಗಿ ಉಪಯೋಗಿಸಲ್ಪಟ್ಟಾಗಲೇ ಈ ಪ್ರಪಂಚದಲ್ಲಿ ಅವನ ಜನ್ಮ ಸಾರ್ಥಕವಾದಂತಾಗುತ್ತದೆ."

**ಗೋಪಿಕಾಗೀತೆ**

ಈಗ ನಾವು **ಗೋಪಿಕಾಗೀತೆ** ಎಂದು ಕರೆಯಲ್ಪಡುವ ಆ ಪ್ರಸಿದ್ಧ ಮೂವತ್ತೊಂದನೆ ಅಧ್ಯಾಯಕ್ಕೆ ಬರುತ್ತೇವೆ. ಗೋಪಿಯರು ಕೃಷ್ಣನನ್ನು ಸ್ತುತಿಸುವ ಈ ಅಧ್ಯಾಯವು ಹತ್ತನೆಯ ಸ್ಕಂಧದ ಬಹುಮುಖ್ಯ ಭಾಗ. ಅದರಲ್ಲಿ ಬರುವ ಎರಡು ಶ್ಲೋಕಗಳನ್ನು ಉದಾಹರಿಸುತ್ತೇನೆ:

**ನ ಖಲು ಗೋಪಿಕಾನಂದನೋ ಭವಾನ್**
**ಅಖಿಲದೇಹಿನಾಮಂತರಾತ್ಮದೃಕ್ ।**
**ವಿಖನಸಾರ್ಥಿತೋ ವಿಶ್ವಗುಪ್ತಯೇ**
**ಸಖ ಉದೇಯಿವಾನ್ ಸಾತ್ವತಾಂ ಕುಲೇ ॥**
೧೦.೩೧.೪

"ನೀನು ಕೇವಲ ಗೋಪಿಕೆಯಾದ ಯಶೋದೆಯ ಪುತ್ರನಲ್ಲ, ನೀನು ಎಲ್ಲ ದೇಹಿಗಳ ಅಂತರಾತ್ಮನೂ ಸಾಕ್ಷಿಯೂ ಆಗಿದ್ದೀಯೆ. ಹೇ ಸಖ, ಸೃಷ್ಟಿಕರ್ತನಾದ ಬ್ರಹ್ಮನ ಪ್ರಾರ್ಥನೆಯಂತೆ ನೀನು ಜಗತ್ತನ್ನು ರಕ್ಷಿಸಲು ಯದುಕುಲದಲ್ಲಿ ಹುಟ್ಟಿರುವೆ."

**ತವ ಕಥಾಮೃತಂ ತಪ್ತಜೀವನಂ**
**ಕವಿಭಿರೀಡಿತಂ ಕಲ್ಮಷಾಪಹಮ್ ।**
**ಶ್ರವಣಮಂಗಲಂ ಶ್ರೀಮದಾತತಂ**
**ಭುವಿ ಗೃಣಂತಿ ತೇ ಭೂರಿದಾ ಜನಾಃ ॥** ೧೦.೩೧.೯

"ನಿನ್ನ ಮಾತುಗಳು (ಹಾಗೂ ನಿನ್ನ ವಿಚಾರವಾದ ಮಾತುಗಳು) ಪಾಪವನ್ನು ನಾಶಮಾಡುವಂತಹವುಗಳು. ಋಷಿಗಳು ಅವುಗಳನ್ನು ಕೊಂಡಾಡಿದ್ದಾರೆ. ದುಃಖತಪ್ತರಾದವರಿಗೆ ಅವು ಅಮೃತಸಮಾನ. ಅವು ಕೇಳುವುದಕ್ಕೆ ಮಂಗಳಕರ, ಮತ್ತು ಶುಭವನ್ನು ಉಂಟುಮಾಡುವಂಥವು. ಯಾರು ಅವುಗಳನ್ನು ಜಗತ್ತಿನಲ್ಲಿ ಹರಡುತ್ತಾರೊ ಅವರೇ ಶ್ರೇಷ್ಠ ದಾನಿಗಳು."

ನಿಜವಾಗಿಯೂ ಇದೇ ನಾವು ಮಾಡಬಹುದಾದ ಅತ್ಯಂತ ಶ್ರೇಷ್ಠಕಾರ್ಯ. ಆಧುನಿಕ ಯುಗದಲ್ಲಿ ಶ್ರೀರಾಮಕೃಷ್ಣರು ಅವತರಿಸಿದರು. ಮಹೇಂದ್ರನಾಥ ಗುಪ್ತರು (ಮ) ತಮ್ಮ ಗ್ರಂಥ "ಶ್ರೀರಾಮಕೃಷ್ಣ ವಚನವೇದ" (ಬಂಗಾಳಿ ಮೂಲ: ಶ್ರೀಶ್ರೀ **ರಾಮಕೃಷ್ಣ ಕಥಾಮೃತ**)ವನ್ನು ಈ ಮೇಲಿನ ಶ್ಲೋಕದೊಂದಿಗೆ ಪ್ರಾರಂಭಿಸುತ್ತಾರೆ. ಇಂದು ಈ ಕಥಾಮೃತವು ಅಸೀಮ ದಯೆ, ಪ್ರೇಮಗಳಿಂದ ಕೂಡಿದ ಪವಿತ್ರ ಜೀವನದ ಅದ್ಭುತ ಜೀವನವನ್ನು ನೀಡುತ್ತದೆ.

ಹತ್ತನೇ ಸ್ಕಂಧದ ಮೂವತ್ತೆರಡನೇ ಅಧ್ಯಾಯದ ಎರಡನೇ ಶ್ಲೋಕದಲ್ಲಿ ಕೃಷ್ಣನು ಗೋಪಗೋಪಿಯರೊಡನೆ ನಡೆಸಿದ ಬೃಂದಾವನ ಲೀಲೆಯು ಪ್ರಾರಂಭವಾಗುತ್ತದೆ. ಅಲ್ಲಿ **ಸಾಕ್ಷಾತ್ ಮನ್ಮಥಮನ್ಮಥಃ** ಎಂಬ ಅತ್ಯಂತ ವಿಶಿಷ್ಟವಾದ ಕೃಷ್ಣನ ವರ್ಣನೆ ಬರುತ್ತದೆ. ಶ್ರೀಕೃಷ್ಣನು ಮನ್ಮಥನಿಗೇ ಮನ್ಮಥ ಇದ್ದ ಹಾಗೆ. ಮನ್ಮಥ ಎಂದರೆ ಜನರನ್ನು ಪ್ರಾಪಂಚಿಕ ಜೀವನದ ಕಡೆ ಸೆಳೆಯುವ ಕಾಮದೇವ. ಶ್ರೀಕೃಷ್ಣನು ಮನ್ಮಥನನ್ನೇ ತನ್ನೆಡೆಗೆ ಸೆಳೆದುಕೊಂಡು ಭಕ್ತರನ್ನು ಕಾಮದೂರರನ್ನಾಗಿ ಮಾಡುತ್ತಾನೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಆತ್ಮನನ್ನು "ಮೃತ್ಯುವಿನ ಮೃತ್ಯು" ಎಂದು ವರ್ಣಿಸಲಾಗಿದೆ. ಏಕೆಂದರೆ ಆತ್ಮಸಾಕ್ಷಾತ್ಕಾರವಾದ ನಂತರ ಸಾವು ಸಾಯುತ್ತದೆ.

**ಶ್ರೀಕೃಷ್ಣನ ಅಂತ್ಯಲೀಲೆ:**

ಹನ್ನೊಂದನೆಯ ಸ್ಕಂಧದಲ್ಲಿ ಯದುಕುಲದ ನಾಶ ಮತ್ತು ಕೃಷ್ಣನ ಅಂತಿಮ ನಿರ್ಗಮನ ಇತ್ಯಾದಿ ಬರುತ್ತವೆ. ನವ **ಯೋಗಿಸಂವಾದ, ಉದ್ಧವಗೀತೆ** ಮುಂತಾದ ಭಾಗವತದ ಅತ್ಯಂತ ಅಗಾಧ ಬೋಧನೆಗಳೂ ಈ ಅಧ್ಯಾಯದಲ್ಲಿ ಬರುತ್ತವೆ.

ಯಾದವರು ಅತ್ಯಂತ ಬಲಿಷ್ಠರಾಗಿ ನಿಯಂತ್ರಣವನ್ನು ಮೀರಿ ಅನೀತಿ ಅತ್ಯಾಚಾರದಲ್ಲಿ ತೊಡಗುತ್ತಾರೆ. ಆದ್ದರಿಂದ ಶ್ರೀಕೃಷ್ಣನು ಒಂದು ಋಷಿಶಾಪದ ಮೂಲಕ ಯದುಕುಲವೇ ನಾಶವಾಗುವಂತೆ ಮಾಡುತ್ತಾನೆ. ಶ್ರೀಕೃಷ್ಣನು ಕೆಲವು ಋಷಿಗಳನ್ನು ಯಾಗಕ್ಕಾಗಿ ಆಹ್ವಾನಿಸುತ್ತಾನೆ. ಕೆಲವು ದುಷ್ಟ ಯಾದವ ಯುವಕರು ಇವರನ್ನು ಪರಿಹಾಸ್ಯ ಮಾಡಲು ಪ್ರಯತ್ನಿಸುತ್ತಾರೆ. ಸಾಂಬ ಎಂಬ ಯುವಕನಿಗೆ ಗರ್ಭಿಣಿ ಸ್ತ್ರೀಯಂತೆ ವೇಷ ತೊಡಿಸಿ ಈ ಋಷಿಗಳ ಬಳಿ ಬಂದು ಕೇಳುತ್ತಾರೆ: "ಓ ಋಷಿಪುಂಗವರೆ! ಈ ಸುಂದರ ಯುವತಿ ಗರ್ಭಿಣಿಯಾಗಿದ್ದಾಳೆ. ಅವಳ ಗರ್ಭದಿಂದ ಹುಟ್ಟುವ ಮಗು ಹೆಣ್ಣೋ ಗಂಡೋ ಹೇಳಬಲ್ಲಿರಾ?" ಋಷಿಗಳು ಈ ಯುವಕರ ವರ್ತನೆಯಿಂದ ಕುಪಿತರಾಗಿ ಹೇಳುತ್ತಾರೆ: "ಮೂರ್ಖರೇ, ಅವಳು ಒಂದು ಒನಕೆಯನ್ನು ಹೆರುತ್ತಾಳೆ. ಅದು ಇಡೀ ಯದುಕುಲವನ್ನೇ ನಾಶ ಮಾಡುತ್ತದೆ." ಈ ಶಾಪದಿಂದ ಭೀತರಾದ ಯುವಕರು ಸಾಂಬನ ಕೃತಕವಾಗಿ ಸೇರಿಸಿದ ಹೊಟ್ಟೆಯನ್ನು ಬಿಚ್ಚಿದರು. ಆಶ್ಚರ್ಯ, ಅಲ್ಲಿ ಒಂದು ಕಬ್ಬಿಣದ ಒನಕೆಯಿತ್ತು! ಅವರು ಅದನ್ನು ಚೂರ್ಣಗೊಳಿಸಿ ಸಮುದ್ರಕ್ಕೆ ಎಸೆದರು. ಅಲ್ಲಿ ಅದು ಪವಾಡ ಸದೃಶವಾಗಿ ಜೊಂಡುಹುಲ್ಲಾಗಿ ಬೆಳೆಯಿತು.

ಅನಂತರ ಶ್ರೀಕೃಷ್ಣನ ಸಲಹೆಯಂತೆ ಯಾದವರು ದ್ವಾರಕೆಯನ್ನು ಬಿಟ್ಟು, ವಿಪತ್ತಿನಿಂದ ಪಾರಾಗಲು ಧಾರ್ಮಿಕವಿಧಿಗಳನ್ನು ಆಚರಿಸುವುದಕ್ಕಾಗಿ ಪ್ರಭಾಸ ಎಂಬ ತೀರ್ಥಸ್ಥಳಕ್ಕೆ ಹೋದರು. ಅಲ್ಲಿ ಅವರು ಎಲ್ಲ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸಿದರು. ಆದರೆ ಮುಂದೆ ತಮ್ಮ ವಿವೇಕವನ್ನು ಕಳೆದುಕೊಂಡು, ಕುಡಿದು ಉನ್ಮತ್ತರಾಗಿ, ಜೊಂಡುಹುಲ್ಲನ್ನು ಕಿತ್ತು ಪರಸ್ಪರ ಹೊಡೆದಾಡಿಕೊಂಡು ಎಲ್ಲ ಮೃತರಾದರು.

ಬಲರಾಮನೂ ಸಮುದ್ರತೀರದಲ್ಲಿ ಯೋಗಸ್ಥನಾಗಿ ದೇಹತ್ಯಾಗ ಮಾಡಿದನು. ಅವನ ನಿರ್ಗಮನವನ್ನು ಕಂಡು ಶ್ರೀಕೃಷ್ಣನು ತನ್ನ ದಿವ್ಯರೂಪದಲ್ಲಿ ಒಂದು ಅಶ್ವತ್ಥವೃಕ್ಷದ ಕೆಳಗೆ ಬಲ

ತೊಡೆಯ ಮೇಲೆ ಎಡಗಾಲನ್ನಿರಿಸಿ ಕುಳಿತುಕೊಂಡನು. ಅವನ ಪಾದವನ್ನು ಪ್ರಾಣಿಯ ಮುಖವೆಂದು ತಪ್ಪಾಗಿ ಭಾವಿಸಿದ ಜರಾ ಎಂಬ ವ್ಯಾಧನು ಬಾಣಬಿಟ್ಟನು. ಹತ್ತಿರ ಬಂದು ನೋಡುತ್ತಾನೆ ಅವನು ಶ್ರೀಕೃಷ್ಣ! ಭೀತನಾದ ವ್ಯಾಧನು ತನ್ನ ತಪ್ಪನ್ನು ಮನ್ನಿಸಬೇಕೆಂದು ಕೃಷ್ಣನ ಪಾದಕ್ಕೆರಗಿ ಬೇಡಿಕೊಳ್ಳುತ್ತಾನೆ. ಎಲ್ಲವೂ ತನ್ನಿಚ್ಛೆಯಿಂದಲೇ ಆಗಿರುವುದಾಗಿ ಹೇಳಿ ಕೃಷ್ಣನು ಅವನನ್ನು ಸಮಾಧಾನಪಡಿಸಿ ಅವನನ್ನು ಹರಸಿ ವೈಕುಂಠಕ್ಕೆ ತೆರಳುತ್ತಾನೆ. ಇಲ್ಲಿಗೆ ಕೃಷ್ಣಲೀಲೆ ಮುಗಿಯುತ್ತದೆ. ಕೃಷ್ಣನ ನಿರ್ಗಮನವನ್ನು ತಿಳಿದು ಇಡೀ ದ್ವಾರಕೆ ಶೋಕಸಾಗರದಲ್ಲಿ ಮುಳುಗುತ್ತದೆ. ಅರ್ಜುನನೂ ದುಃಖಿತಪ್ತನಾಗಿ ಯಾದವರ ಅಂತ್ಯಸಂಸ್ಕಾರವನ್ನು ನೆರವೇರಿಸುತ್ತಾನೆ. ದ್ವಾರಕಾನಗರವನ್ನು ಸಮುದ್ರ ಆವರಿಸುತ್ತದೆ. ಹೀಗೆ ಯದುಕುಲ ನಾಶವಾಗುತ್ತದೆ.

ರಾಜ ನಿಮಿಯ ಪ್ರಶ್ನೆಗಳಿಗೆ ಉತ್ತರವಾಗಿ ನವಯೋಗಿಗಳು ಸುಂದರವಾಗಿ ಪ್ರತಿಪಾದಿಸಿದ ಭಾಗವತಧರ್ಮವು ಈ ಸ್ಕಂಧದಲ್ಲಿ ಬರುತ್ತದೆ. ಈ ನವಯೋಗಿಗಳು ರಾಜ ಋಷಭನ ಪುತ್ರರು. ಅವರು ಎಳೆಯ ವಯಸ್ಸಿನಲ್ಲೇ ಪ್ರಪಂಚವನ್ನು ತ್ಯಜಿಸಿ ಅತ್ಯುನ್ನತ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದಿದ್ದರು. ಆತ್ಮನಲ್ಲೇ ನೆಲೆನಿಂತಿದ್ದ ಅವರು ದಿಗಂಬರರಾಗಿಯೇ ಅಲೆಯುತ್ತಿದ್ದರು. ಒಮ್ಮೆ ಅವರು ನಿಮಿಯು ಆಚರಿಸುತ್ತಿದ್ದ ಬ್ರಹ್ಮಸತ್ರಕ್ಕೆ ಆಗಮಿಸಿದರು. ಮಹಾ ತೇಜಸ್ಸಿನಿಂದ ಬೆಳಗುತ್ತಿದ್ದ ಅವರನ್ನು ನೋಡಿ ನಿಮಿಯು ಅಪಾರ ಶ್ರದ್ಧಾಭಕ್ತಿಯಿಂದ ಸತ್ಕರಿಸಿದನು. ಅವರು ರಾಜನಿಗೆ ಭಾಗವತಧರ್ಮವನ್ನು ಉಪದೇಶಿಸಿದರು. ಭಕ್ತಿ ಮತ್ತು ಜ್ಞಾನಗಳ ವಿಚಾರವನ್ನು ಒಳಗೊಂಡ ಇದರಲ್ಲಿ ಭಾಗವತದ ಸಾರವೇ ಅಡಕವಾಗಿದೆ.

## ಮಾನವನ ವೈಶಿಷ್ಟ್ಯ

ಈ ಗ್ರಂಥದಲ್ಲಿ ಮಾನವೀಯ ಅಂಶಗಳು ಪ್ರಧಾನವಾಗಿ ಎದ್ದು ಕಾಣುತ್ತವೆ. ಅನೇಕ ಕಥೆಗಳ ಮೂಲಕ ಮಾನವನು ದೇವತೆಗಳಿಗಿಂತ ಶ್ರೇಷ್ಠನೆಂಬುದನ್ನು ಭಾಗವತ ಚಿತ್ರಿಸುತ್ತದೆ. ಆಂತರಿಕ ದಿವ್ಯತೆಯನ್ನು ಅಭಿವ್ಯಕ್ತಗೊಳಿಸುವ ಸಾಧ್ಯತೆ ಮಾನವನಿಗೆ ಮಾತ್ರ ಇದೆ.

ಅಪಶಕುನಗಳನ್ನು ಕಂಡ ಉದ್ಧವನು ಭಗವಂತನು ಜಗತ್ತಿನಿಂದ ಬೇಗ ನಿರ್ಗಮಿಸುವನೆಂಬುದನ್ನು ಅರಿತು ಭಕ್ತಿಪೂರ್ವಕವಾಗಿ ಶ್ರೀಕೃಷ್ಣನ ಹತ್ತಿರ ಹೋಗಿ ಈ ರೀತಿ ಪ್ರಾರ್ಥಿಸುತ್ತಾನೆ: "ಹೇ ಪ್ರಭು! ನೀನು ಹೊರಟು ಹೋಗುವುದಕ್ಕೆ ಮುಂಚೆ ನಮಗೆ ಏನಾದರೂ ಆಧ್ಯಾತ್ಮಿಕ ಬೋಧನೆಯನ್ನು ನೀಡು. ನಾವು ನಿನ್ನಿಂದ ಇದನ್ನು ಕೇಳಬಯಸುತ್ತೇವೆ." ಮುಂದೆ ಪ್ರಾರಂಭವಾಗುವ ಗುರು-ಶಿಷ್ಯ ಸಂವಾದ ಹನ್ನೊಂದನೆ ಸ್ಕಂಧದ ಅತಿ ಮುಖ್ಯ ಭಾಗ. ಇದನ್ನೇ ಉದ್ಧವಗೀತೆ ಎಂದು ಕರೆಯುವುದು. ಇದರಿಂದ ಎರಡು ಶ್ಲೋಕಗಳನ್ನು ಉದಾಹರಿಸುತ್ತೇನೆ:

**ಸೃಷ್ಟ್ವಾ ಪುರಾಣಿ ವಿವಿಧಾನ್ಯಜಯಾಽಽತ್ಮಶಕ್ತ್ಯಾ**
**ವೃಕ್ಷಾನ್ ಸರಿಸೃಪಪಶೂನ್ ಖಗದಂಶ ಮತ್ಸ್ಯಾನ್ ।**
**ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ**
**ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ॥**

೧೧.೯.೨೮

ಮೊದಲು ಬ್ರಹ್ಮನು ವಿವಿಧ ವಿಕಾಸದ ಹಂತದಲ್ಲಿರುವ ಜಗತ್ತನ್ನೂ ಪ್ರಾಣಿಗಳನ್ನೂ ಸೃಷ್ಟಿಸಿದನು. ಆದರೆ ಈ ಸಸ್ಯ, ಸರ್ಪ, ಮತ್ಸ್ಯ, ಪಕ್ಷಿ ಇವಾವುಗಳಿಂದಲೂ ಅವನಿಗೆ ತೃಪ್ತಿಯಾಗಲಿಲ್ಲ. ಏಕೆಂದರೆ, ತಾನು ಅವುಗಳಲ್ಲಿ ಪ್ರವೇಶಿಸಿದರೆ ಪುನಃ ತನ್ನನ್ನು ಕಂಡುಕೊಳ್ಳಲಾಗುವುದಿಲ್ಲ ಎಂದು ಅವನು ಭಾವಿಸಿದನು. ಆಗ ಅವನು ಮಾನವನನ್ನು ಸೃಷ್ಟಿಸಿ, ಅವನ ರೂಪವನ್ನು ಕಂಡು ಭಗವಂತನು ಸಂತೋಷಗೊಂಡನು (**ಮುದಮಾಪ ದೇವಃ**). ಏಕೆಂದರೆ ಅವನ ಮೂಲಕ ತನ್ನನ್ನು ತಾನು ಮತ್ತೆ ಪಡೆಯಬಹುದು ಎಂಬುದು ಅವನ ಅನಿಸಿಕೆ. ಇದು ಮಾನವರೂಪದ ವೈಶಿಷ್ಟ್ಯ.

**ಲಬ್ಧ್ವಾ ಸುದುರ್ಲಭಮಿದಂ ಬಹುಸಂಭವಾಂತೇ**
**ಮಾನುಷ್ಯಮರ್ಥದಮನಿತ್ಯಮಪೀಹ ಧೀರಃ ।**
**ತೂರ್ಣಂ ಯತೇತ ನ ಪತೇದನುಮೃತ್ಯು ಯಾವತ್**
**ನಿಃಶ್ರೇಯಸಾಯ ವಿಷಯಃ ಖಲು ಸರ್ವತಃ ಸ್ಯಾತ್॥**

೧೧.೯.೨೯

ಇಲ್ಲಿ ಜೀವಶಾಸ್ತ್ರಜ್ಞ ಜೂಲಿಯನ್ ಹಕ್ಸ್ಲೆ ಸೂಚಿಸಿದ ಮಾನವ ಸಾಧ್ಯತೆಗಳ ವಿಜ್ಞಾನದ ಭಾವನೆಯನ್ನು ಕಾಣುತ್ತೇವೆ. ಸುದೀರ್ಘ ವಿಕಾಸದ ಪ್ರಕ್ರಿಯೆಯ ಮೂಲಕ (**ಬಹುಸಂಭವಾಂತೇ**) ಬಹು ಕಷ್ಟದಿಂದ ಈ ಮಾನವ ದೇಹವನ್ನು ಪಡೆದಿದ್ದೇವೆ (**ಲಬ್ಧ್ವಾ ಸುದುರ್ಲಭಮಿದಂ**). ಇದು ಅನಿತ್ಯವಾದರೂ (**ಅನಿತ್ಯಮಪೀಹ** ) ಅತ್ಯಂತ ಫಲಪ್ರದವಾದುದು (**ಅರ್ಥದಂ**). ನಾವು ಇದನ್ನು ಯಾವುದಕ್ಕಾಗಿ ಉಪಯೋಗಿಸಬೇಕು? **ನಿಃಶ್ರೇಯಸಾಯ**—ಮುಕ್ತಿ ಅಥವಾ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ. ಸ್ವತಂತ್ರರಾಗಿ. ಪ್ರಾಣಿಗಳಿಗೆ ಸ್ವಾತಂತ್ರ್ಯವಿಲ್ಲ. ಅವುಗಳು ಸಂಪೂರ್ಣವಾಗಿ ಭೌತಿಕ ಸ್ವಭಾವದಿಂದ ನಿಯಂತ್ರಿತವಾಗಿವೆ. ಆದರೆ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಮಾನವನಿಗೆ ಸ್ವಾತಂತ್ರ್ಯವಿದೆ. ಪ್ರಕೃತಿಯ ಒತ್ತಡವಿದ್ದರೂ ಅವನು ಪ್ರಕೃತಿಯನ್ನು ಮೀರಿ ಹೋಗಬಲ್ಲ. ನಮ್ಮ ನಿಜವಾದ ಸ್ವಭಾವ ದಿವ್ಯವಾದುದು. ಆದ್ದರಿಂದ **ತೂರ್ಣಂ ಯತೇತ**—ಎಷ್ಟು ಬೇಗ ನೀವು ಸ್ವಾತಂತ್ರ್ಯ ಅಥವಾ ನಿಃಶ್ರೇಯಸ್ಸಿಗಾಗಿ ಹೋರಾಡಿದರೆ ಅಷ್ಟೂ ಒಳ್ಳೆಯದು. ಏಕೆಂದರೆ ಈ ದೇಹ ಯಾವಾಗ ಬೇಕಾದರೂ ಬಿದ್ದುಹೋಗಬಹುದು. ನೀವು ಪ್ರಾಣಿಗಳಂತೆ ಇಂದ್ರಿಯ ಜೀವನದಲ್ಲಿ ತೊಡಗಿದರೆ ನಿಮಗೂ ಪ್ರಾಣಿಗಳಿಗೂ ಏನು ವ್ಯತ್ಯಾಸ? ನಿಜವಾದ ವ್ಯತ್ಯಾಸವಿರುವುದು ನೀವು ಇಂದ್ರಿಯಮಟ್ಟವನ್ನು, ಭೌತಿಕಸ್ವಭಾವವನ್ನು ಮೀರಿ ಹೋಗಲು ಪ್ರಯತ್ನಿಸಿದಾಗ.

ದುರದೃಷ್ಟವಶಾತ್, ಅನೇಕ ಆಧುನಿಕ ಸ್ತ್ರೀಪುರುಷರು ಇಂದ್ರಿಯ ಜೀವನಕ್ಕೆ ಮಿಗಿಲಾದುದೇನನ್ನೂ ಅರಿಯರು. ಸುಖ ಮತ್ತು ಭೌತಿಕ ಸೌಕರ್ಯಗಳಿಗೆ ನಾವು ಮರುಳಾಗಿಬಿಟ್ಟಿದ್ದೇವೆ. ಇದೇ ಪ್ರವೃತ್ತಿ ಮುಂದುವರಿದರೆ ಇಡೀ ನಾಗರಿಕತೆ, ರೋಮ್ ನಾಗರಿಕತೆಯಂತೆ ನುಚ್ಚುನೂರಾಗಿ ಹೋಗುತ್ತದೆ. ಆಧ್ಯಾತ್ಮಿಕತೆಯನ್ನು ಜೀವನದ ಗುರಿಯಾಗಿ ಮಾಡಿಕೊಳ್ಳದಿದ್ದರೆ ಪಶ್ಚಿಮದ ನಾಗರಿಕತೆ ಬಹಳ ಕಾಲ ಉಳಿಯಲಾರದೆಂದು ಸ್ವಾಮಿ ವಿವೇಕಾನಂದರು ಆಗಲೆ ಎಚ್ಚರಿಸಿದ್ದರು. ವಿಜ್ಞಾನ ಮತ್ತು ತಾಂತ್ರಿಕತೆ ನಮಗೆ ಮೌಲ್ಯವನ್ನು ನೀಡಲಾರವು. ಮೌಲ್ಯಗಳು ನಮಗೆ ದೇಹದಿಂದಲೂ ದೊರೆಯುವುದಿಲ್ಲ. ದೇಹವು ಜೀನ್ಸ್‌ಗಳಿಂದ ಉಂಟಾಗಿವೆ, ಜೀನ್ಸ್ ಸ್ವಭಾವವೇ ಸ್ವಾರ್ಥ. ಅವು ಇತರರ ಬಗ್ಗೆ ಚಿಂತಿಸಲಾರವು. ಆದ್ದರಿಂದ ನಾವು ಈ ದೇಹ ಮತ್ತು ಇಂದ್ರಿಯಾಸಕ್ತಿಯಿಂದ ಪಾರಾಗಿ ಉನ್ನತವಾದುದನ್ನೂ ಶಾಶ್ವತವಾದುದನ್ನೂ ಪಡೆಯಬೇಕು. ಇಂದ್ರಿಯಮಟ್ಟವನ್ನು ಮೀರಿದ ಸ್ಥಿತಿ ಯಾವುದು ಎಂಬ ಪ್ರಶ್ನೆಗೆ ನಾವು ಉತ್ತರವನ್ನು ಕಂಡುಕೊಳ್ಳಬೇಕು. ಬಹಳ ಹಿಂದೆಯೇ ಭಾರತವು ಉಪನಿಷತ್ತುಗಳಲ್ಲಿ ಇದಕ್ಕೆ ಉತ್ತರವನ್ನು ಕಂಡುಕೊಂಡಿತು. ಕಠೋಪನಿಷತ್ತಿನಲ್ಲಿ ಬರುವ ಒಂದು ಶ್ಲೋಕವು ಹೀಗೆ ಹೇಳುತ್ತದೆ: ಅತ್ಯಂತ ಸಾಮಾನ್ಯವೂ ಸ್ಥೂಲವೂ ಆದ ಮಾಂಸ ಶಕ್ತಿಯ ಹಿಂದೆ ಸೂಕ್ಷ್ಮವಾದ ನರಶಕ್ತಿ ಇದೆ, ಇದರ ಹಿಂದೆ ಇದಕ್ಕಿಂತಲೂ ಸೂಕ್ಷ್ಮವಾದ ಮಾನಸಿಕಶಕ್ತಿ ಇದೆ, ಮತ್ತು ಇದಕ್ಕಿಂತಲೂ ಸೂಕ್ಷ್ಮಾತಿಸೂಕ್ಷ್ಮವಾದ ಆತ್ಮಶಕ್ತಿ ಇದೆ. ಹೀಗೆ ಮಾನವನ ಶಕ್ತಿಮೂಲಗಳು ಸೂಕ್ಷ್ಮವೂ ಅಪಾರವೂ ಅಗಾಧವೂ ಆಗುತ್ತ ಹೋಗುತ್ತವೆ.

'ನೀನು ಅದೇ'—ತತ್ತ್ವಮಸಿ—ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ. ನೀವು ಅಲ್ಪ ಜೈವಿಕ ಜೀವಿಗಳಲ್ಲ, ನೀವು ಆ ಅನಂತ ಆತ್ಮ, ಅದೇ ನಿಮ್ಮ ನಿಜಸ್ವರೂಪ. ಇದೇ ಬೋಧನೆಯೇ ಭಾಗವತದಲ್ಲಿಯೂ ಇದೆ. ಇದನ್ನು ಭಕ್ತಿಯ ಮೂಲಕ ಅಲ್ಲಿ ಹೇಳಲಾಗಿದೆ. ಭಕ್ತಿಯ ಮೂಲಕ ಅತ್ಯುನ್ನತ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆಯಬಹುದು. ಮೊದಲೇ ಸೂಚಿಸಿದಂತೆ ಭಕ್ತಿಯ ಅನೇಕ ಆಯಾಮಗಳಿವೆ. ಭಕ್ತಿ ಬೆಳೆಯುತ್ತ, ತೀವ್ರವಾಗುತ್ತ ಹೋಗುತ್ತದೆ. ಇದನ್ನೇ ಆಧ್ಯಾತ್ಮಿಕ ವಿಕಾಸ ಎಂದು ಕರೆಯುವುದು. ಆದರೆ ನಾವು ಸಾವಿರಾರು ವರ್ಷಗಳಿಂದಲೂ ಈ ಸತ್ಯವನ್ನು ಮರೆತೆವು. ಹಲವಾರು ವರ್ಷಗಳಿಂದಲೂ ದೇವಸ್ಥಾನಕ್ಕೆ ಹೋಗುತ್ತಿದ್ದರೂ ಜನರು ಒಂದೇ ಸಮನಾಗಿರುತ್ತಾರೆ. ಅವರ ನಡತೆ ವರ್ತನೆಗಳು ಉತ್ತಮವಾಗುವುದೇ ಇಲ್ಲ. ಆ ರೀತಿ ದೇವಸ್ಥಾನಕ್ಕೆ ಹೋಗುವುದರಿಂದ ಏನು ಪ್ರಯೋಜನ? ನಾವು ಕ್ರಿಯಾಶೀಲ ಆಧ್ಯಾತ್ಮಿಕತೆಯನ್ನು ಬೆಳೆಸಬೇಕು. ನಮ್ಮ ಆಧ್ಯಾತ್ಮಿಕ ಪ್ರಜ್ಞೆ ಜಾಗೃತವಾಗಬೇಕು ಮತ್ತು ಅದು ಉನ್ನತ ಮಟ್ಟಕ್ಕೆ ಏರುತ್ತ ಹೋಗಬೇಕು. "ನಿಮಗೆ ಆಧ್ಯಾತ್ಮಿಕ ಜಾಗೃತಿಯುಂಟಾಗಲಿ"—ಹೀಗೆ ಶ್ರೀರಾಮಕೃಷ್ಣರು ಎಲ್ಲರನ್ನೂ ಆಶೀರ್ವದಿಸುತ್ತಿದ್ದರು. ಭಾಗವತವೂ ಇದೇ ಭಾವನೆಯನ್ನೆ ಮತ್ತೆ ಮತ್ತೆ ಒತ್ತಿ ಹೇಳುತ್ತದೆ.

## ವಿಜ್ಞಾನ ಮತ್ತು ಆಧ್ಯಾತ್ಮಿಕತೆಗಳ ಅವಿರೋಧ

ಭಾರತದಲ್ಲಿ ಪಶ್ಚಿಮದಲ್ಲಿಯಂತೆ ವಿಜ್ಞಾನ ಮತ್ತು ಆಧ್ಯಾತ್ಮಿಕತೆಗಳ ನಡುವೆ ಯಾವ ವಿರೋಧವನ್ನೂ ನಾವು ಕಾಣುವುದಿಲ್ಲ. ಈ ಮಾತು ಹನ್ನೊಂದನೇ ಸ್ಕಂಧದಲ್ಲಿ ಕೃಷ್ಣನ ಬಾಯಿಂದಲೇ ಬರುತ್ತದೆ. ಶ್ರೀಕೃಷ್ಣನು ತನ್ನ ಅಂತಿಮ ಸಂದೇಶವನ್ನು ತನ್ನ ಶಿಷ್ಯರಿಗೂ ಉದ್ಧವನಿಗೂ ನೀಡುತ್ತಾನೆ. ಅದರಲ್ಲಿ ವಿಶೇಷವಾಗಿ ಮೂರು ಶ್ಲೋಕಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಧರ್ಮ ಮತ್ತು ವಿಜ್ಞಾನಗಳ ಸಮನ್ವಯ ಭಾವನೆ ಅವುಗಳಲ್ಲಿ ಬರುತ್ತದೆ. ಹೊರಪ್ರಪಂಚದಿಂದ ಒಳಪ್ರಪಂಚದೆಡೆಗೆ ನಿರಂತರ ಮುನ್ನಡೆಯನ್ನು ವಿಜ್ಞಾನ ಮತ್ತು ಧರ್ಮಗಳಲ್ಲಿ ನಾವು ಕಾಣುತ್ತೇವೆ.

**ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।**
**ಸಮುದ್ಧರಂತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್ ॥**

೧೧.೭.೧೯

"ಸಾಮಾನ್ಯವಾಗಿ ಪ್ರಪಂಚದಲ್ಲಿ ಮನುಷ್ಯರು ಬಾಹ್ಯ ಜಗತ್ತಿನ ಸತ್ಯವನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗಿರುತ್ತಾರೆ. ಇದರ ಮೂಲಕ ಅವರು ಅಶುಭಗಳಿಂದ ಪಾರಾಗಿ ತಮ್ಮನ್ನು ಉದ್ಧರಿಸಿಕೊಳ್ಳುತ್ತಾರೆ."

**ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ ।**
**ಯತ್ಪ್ರತ್ಯಕ್ಷಾನುಮಾನಾಭ್ಯಾಂ ಶ್ರೇಯೋಽಸಾವನುವಿಂದತೇ ॥**

೧೧.೭.೨೦

"ತನಗೆ ತಾನೇ ಗುರು, ಅದರಲ್ಲೂ ವಿಶೇಷವಾಗಿ ಮಾನವರ ವಿಷಯದಲ್ಲಿ. (ಮಾನವೇತರರಿಗೆ ಪ್ರಕೃತಿ ಗುರು.) ಏಕೆಂದರೆ ಮಾನವನು ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳ ಸಹಾಯದಿಂದ ಪಡೆದ (ವೈಜ್ಞಾನಿಕ ಜ್ಞಾನದ ಮೂಲಕ) ಸಾಂಸ್ಕೃತಿಕವಾಗಿ ಉನ್ನತಿಯನ್ನು ಸಾಧಿಸಬಲ್ಲ."

ಮಾನವನ ಸಾಧ್ಯತೆಗಳು ಇಷ್ಟಕ್ಕೇ ಸೀಮಿತವೆ? ಆಧುನಿಕ ಭೌತಿಕ ವಿಜ್ಞಾನವು 'ಹೌದು' ಎನ್ನುತ್ತದೆ. ಆದರೆ ವೇದಾಂತ 'ಇಲ್ಲ' ಎನ್ನುತ್ತದೆ. ವೇದಾಂತದ ಪ್ರಕಾರ ವಿಜ್ಞಾನವು ಮಾನವನ ಅಂತರ್ಜಗತ್ತಿಗೂ ಅನ್ವಯವಾಗಬೇಕು. ಆದ್ದರಿಂದ ಮುಂದಿನ ಶ್ಲೋಕ ಹೇಳುತ್ತದೆ:

**ಪುರುಷತ್ವೇ ಚ ಮಾಂ ಧೀರಾಃ ಸಾಂಖ್ಯಯೋಗವಿಶಾರದಾಃ ।**
**ಆವಿಸ್ತರಾಂ ಪ್ರಪಶ್ಯಂತಿ ಸರ್ವಶಕ್ತ್ಯುಪಬೃಂಹಿತಮ್ ॥**

೧೧.೭.೨೧

"ಮಾನವನಿಗೆ ಇನ್ನೊಂದು ಸಾಮರ್ಥ್ಯವಿದೆ. ಜ್ಞಾನಿಗಳು ಆಧ್ಯಾತ್ಮಿಕ ವಿಜ್ಞಾನ ಮತ್ತು ತಾಂತ್ರಿಕತೆಗಳಲ್ಲಿ ಪಳಗಿದವರಾಗಿ, ತಮ್ಮೊಳಗೇ ಇರುವ ಸರ್ವಶಕ್ತನೂ ಅನಂತನೂ ಆದ ನನ್ನನ್ನು

(ವಿಶ್ವಾತ್ಮನನ್ನು) ಸಾಕ್ಷಾತ್ಕರಿಸಿಕೊಳ್ಳಬಲ್ಲರು."

ಮೇಲೆ ಉದಾಹರಿಸಿದ ಮೊದಲನೆ ಶ್ಲೋಕದ ಪ್ರಕಾರ, ಸಾಮಾನ್ಯವಾಗಿ ಜನರು ತಮ್ಮ ಜೀವನವನ್ನು ತಾವೇ ನಿರ್ವಹಿಸುವುದರಲ್ಲಿ ಸಮರ್ಥರು. ಅವರು ತಾವು ಬಾಳುವ ಜಗತ್ತಿನ ಸ್ವಭಾವವನ್ನು ಅರಿಯಬಲ್ಲರು. ಇದು ವಿಜ್ಞಾನ. ಇದರ ಮೂಲಕ ಅವರು ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಏರಬಲ್ಲರು. ಇದಕ್ಕಾಗಿ ಅವರು ಯಾರನ್ನೂ ಅವಲಂಬಿಸಬೇಕಾಗಿಲ್ಲ. ಈ ವಿಷಯದಲ್ಲಿ ನಿಮಗೆ ಸಹಾಯ ಮಾಡಲು ಯಾವ ದೇವರೂ ಅಲ್ಲಿ ಕುಳಿತುಕೊಂಡಿಲ್ಲ. ಎರಡನೆಯ ಶ್ಲೋಕ ಹೇಳುತ್ತದೆ, ಮಾನವ ತನಗೆ ತಾನೇ ಗುರು ಎಂದು. ಪ್ರಾಣಿಗಳಿಗೆ ಗುರು ಪ್ರಕೃತಿ. ಮಾನವನು ತನಗೆ ತಾನೇ ಒಡೆಯ. ತಾನೇ ಬೆಳವಣಿಗೆಯನ್ನು ಸಾಧಿಸಬಲ್ಲ. ಹೇಗೆ? ಪ್ರತ್ಯಕ್ಷಾನುಮಾನಗಳ ಮೂಲಕ ಪಡೆದ ವೈಜ್ಞಾನಿಕ ಜ್ಞಾನವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ. ತಥ್ಯಗಳನ್ನೂ ದತ್ತಾಂಶಗಳನ್ನೂ ಸಂಗ್ರಹಿಸಿ, ಅವುಗಳನ್ನು ಕುರಿತು ಚರ್ಚಿಸಿ, ಪ್ರಶ್ನಿಸಿ ಜ್ಞಾನವನ್ನು ಪಡೆಯಬೇಕು. ಹೀಗೆ ನೀವು ಈ ಪ್ರಪಂಚದಲ್ಲಿ ಆತ್ಮ-ಪ್ರಭುತ್ವವನ್ನು ಪಡೆಯುತ್ತೀರಿ. ಆದರೆ ಇದೇ ನಮ್ಮ ಸಾಧನೆಯ ಕೊನೆಯಲ್ಲ. ಕೃಷ್ಣನು ಹೇಳುವಂತೆ ಮುಂದಿನ ಹಂತ ಆಧ್ಯಾತ್ಮಿಕವಾದುದು—ಅಂತರಾತ್ಮನ ಸಾಕ್ಷಾತ್ಕಾರ. ಅಧ್ಯಾತ್ಮವಿಜ್ಞಾನವು (ಸಾಂಖ್ಯಯೋಗ) ಅಂತರಾತ್ಮನ ಜ್ಞಾನವನ್ನು ನೀಡುತ್ತದೆ.

ಶ್ರೀಕೃಷ್ಣನು ಭಾಗವತದಲ್ಲಿ ಇದನ್ನು ಪ್ರತಿಪಾದಿಸುತ್ತಾನೆ. ಇಲ್ಲಿ ವಿಜ್ಞಾನ ಮತ್ತು ಧರ್ಮಗಳ ನಡುವಿನ ಭೇದವನ್ನು ಹೋಗಲಾಡಿಸಲಾಗಿದೆ. ಪಶ್ಚಿಮದಲ್ಲಿ ಈ ಭೇದ ಯಾವಾಗಲೂ ಇದ್ದದ್ದೆ. ಅಲ್ಲಿ ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರೋಧಿಗಳು. ಇದರ ಪರಿಣಾಮವಾಗಿ ಅನೇಕ ವಿಜ್ಞಾನಿಗಳು ಪ್ರಾಣ ಕಳೆದುಕೊಳ್ಳಬೇಕಾಯಿತು. ನಮ್ಮ ದೇಶವು ಸಾವಿರಾರು ವರ್ಷಗಳ ಹಿಂದೆಯೇ ಅಂಕಗಣಿತ, ಖಗೋಳಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಶಸ್ತ್ರಚಿಕಿತ್ಸೆ ಮುಂತಾದ ವೈಜ್ಞಾನಿಕ ಕ್ಷೇತ್ರದಲ್ಲಿ ಅದ್ಭುತ ಮುನ್ನಡೆಯನ್ನು ಸಾಧಿಸಿತ್ತು. ಆದರೆ ನಮ್ಮ ಅತ್ಯಂತ ಶ್ರೇಷ್ಠ ಆವಿಷ್ಕಾರವೆಂದರೆ ಮಾನವನಲ್ಲಡಗಿರುವ ಅನಂತಾತ್ಮ. ಹೀಗೆ ಭಾಗವತದಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮಿಕತೆಗಳ ಸಮನ್ವಯವನ್ನೂ ಕಾಣುತ್ತೇವೆ.

### ಅವಧೂತನ ಕಥೆ

ಉದ್ಧವಗೀತೆಯ ಭಾಗವಾಗಿ ಅವಧೂತನ ಕಥೆ ಬರುತ್ತದೆ. ಇವನಿಗೆ ಇಪ್ಪತ್ತನಾಲ್ಕು ಗುರುಗಳಿದ್ದರು. ಅವರಲ್ಲಿ ಒಬ್ಬರು ತುಂಬ ವಿಶಿಷ್ಟ. ಆಕೆ ಪಿಂಗಲಾ ಎಂಬ ವೇಶ್ಯೆ. ಅತ್ಯಂತ ವಿಷಾದದ ಭಾವದಲ್ಲಿರುವಾಗ ಒಮ್ಮೆ ಇಂದ್ರಿಯ ಜೀವನದ ಬಗ್ಗೆ ತೀವ್ರ ತಿರಸ್ಕಾರ ಅವಳಲ್ಲಿ ಉಂಟಾಗುತ್ತದೆ. ಇಂಥ ವೈರಾಗ್ಯದ ಸಂದರ್ಭದಲ್ಲಿ ಆಕೆಯ ಬಾಯಿಂದ ಹಾಡೊಂದು ಹೊರಹೊಮ್ಮುತ್ತದೆ. ಈ ದೇಹ ಎಂಥ ಕುತ್ಸಿತವಾದುದು ಮತ್ತು ಅದರಲ್ಲಿ ಸುಖವನ್ನು ಅನುಭವಿಸುವುದು ಎಂಥ ಅಸಹ್ಯ ಮತ್ತು ಮೂರ್ಖತನ ಎಂಬುದು ಆ ಹಾಡಿನ ಭಾವವಾಗಿತ್ತು. ಕೊನೆಯಲ್ಲಿ ಆಕೆ ಈ ಭೋಗಾಸಕ್ತಿಯನ್ನು ತೊರೆದು ಭಗವಂತನಲ್ಲಿ ಶರಣಾಗುವ ದೃಢಸಂಕಲ್ಪ ಮಾಡುತ್ತಾಳೆ.

ಭಿಕ್ಷುಗೀತೆ ಎಂಬುದು ಉದ್ಧವಗೀತೆಯ ಇನ್ನೊಂದು ಭಾಗ. ಉದ್ಧವನ ಪ್ರಶ್ನೆಗೆ ಉತ್ತರವಾಗಿ ಶ್ರೀಕೃಷ್ಣನು ಒಬ್ಬ ಬ್ರಾಹ್ಮಣನ ಕಥೆಯನ್ನು ಹೇಳುತ್ತಾನೆ. ಈ ಬ್ರಾಹ್ಮಣನು ಮೊದಲು ಅತ್ಯಂತ ಜಿಪುಣನಾಗಿದ್ದ. ಮುಂದೆ ವೈರಾಗ್ಯವನ್ನು ಹೊಂದಿ ಭಿಕ್ಷುಕ ಜೀವನವನ್ನು ಹಿಡಿಯುತ್ತಾನೆ. ಭಿಕ್ಷುಗೀತೆ ಒಂದು ಸ್ವಗತ ರೂಪದಲ್ಲಿದೆ. ಸಂಸಾರದ ದುಃಖಗಳಿಗೆಲ್ಲ ವ್ಯಕ್ತಿಯೇ ಕಾರಣನೇ ಹೊರತು ಬಾಹ್ಯಸನ್ನಿವೇಶಗಳಲ್ಲ ಎಂಬುದನ್ನು ಅದು ಸೂಚಿಸುತ್ತದೆ.

ಈ ಉಪದೇಶಗಳ ಕೊನೆಯಲ್ಲಿ ಉದ್ಧವನು ಶ್ರೀಕೃಷ್ಣನನ್ನು ಕುರಿತು ಕೇಳುತ್ತಾನೆ : "ಹೇ ಪ್ರಭು, ನೀನು ಅನೇಕ ವಿಷಯಗಳನ್ನು ಹೇಳಿರುವೆ. ಆದರೆ ಈಗ ಅನುಷ್ಠಾನಕ್ಕೆ ಯೋಗ್ಯವಾದ ನಿರ್ದಿಷ್ಟವಾದುದೇನನ್ನಾದರೂ ಹೇಳು." ಉತ್ತರವಾಗಿ ಕೃಷ್ಣನು ಅವನಿಗೆ ಭಾಗವತ ಧರ್ಮವನ್ನು ಅನುಸರಿಸಲು ಹೇಳುತ್ತಾನೆ. ಅದರ ಮುಖ್ಯಾಂಶಗಳು ಯಾವುವೆಂದರೆ, ವ್ಯಕ್ತಿ ತನ್ನ ಕರ್ತವ್ಯಗಳನ್ನು ಭಗವತ್ಸೇವೆಯಾಗಿ ನೆರವೇರಿಸುವುದು ಮತ್ತು ಸರ್ವಭೂತಗಳಲ್ಲೂ ಭಗವಂತನನ್ನು ನೋಡುವುದು. ಭಾಗವತದ ಮುಖ್ಯಬೋಧನೆಗಳೆಲ್ಲವೂ ಈ ಅಧ್ಯಾಯದಲ್ಲಿ ಬರುತ್ತದೆ.

ಈ ಮಹಾನ್ ಗ್ರಂಥವು ಈ ಕೆಳಗಿನ ಪ್ರಸಿದ್ಧ ಶ್ಲೋಕದೊಂದಿಗೆ ತನ್ನ ಸಮ್ಮೋಹಕ ಆಧ್ಯಾತ್ಮಿಕ ಬೋಧನೆಯನ್ನು ಅಂತ್ಯಗೊಳಿಸುತ್ತದೆ. ಇದು ಕೊನೆಯ ಸ್ಕಂಧದ ಕೊನೆಯ ಅಧ್ಯಾಯದ ಮೊದಲನೆಯ ಶ್ಲೋಕ:

> ಯಂ ಬ್ರಹ್ಮಾವರುಣೇಂದ್ರರುದ್ರಮರುತಃ
> ಸ್ತುನ್ವಂತಿ ದಿವ್ಯೈಃ ಸ್ತವೈಃ
> ವೇದೈಃ ಸಾಂಗಪದಕ್ರಮೋಪನಿಷದ್ಯೈ-
> ರ್ಗಾಯಂತಿ ಯಂ ಸಾಮಗಾಃ ।
> ಧ್ಯಾನಾವಸ್ಥಿತತದ್ಗತೇನ ಮನಸಾ
> ಪಶ್ಯಂತಿ ಯಂ ಯೋಗಿನೋ
> ಯಸ್ಯಾಂತಂ ನ ವಿದುಃ ಸುರಾಸುರಗಣಾ
> ದೇವಾಯ ತಸ್ಮೈ ನಮಃ ॥

"ಯಾರನ್ನು ಬ್ರಹ್ಮಾ ವರುಣ ಇಂದ್ರ ರುದ್ರ ಮತ್ತು ಮರುತ್‌ಗಣಗಳು ದಿವ್ಯಸ್ತವಗಳ ಮೂಲಕ ಸ್ತುತಿಸುತ್ತಾರೊ, ಯಾರ ಮಹಿಮೆಯನ್ನು ಸಾಮಗರು ಸಾಂಗವೇದ ಮತ್ತು ಉಪನಿಷತ್ತುಗಳ ಮೂಲಕ ಗಾನಮಾಡುತ್ತಾರೊ, ಯಾರನ್ನು ಯೋಗಿಗಳು ಧ್ಯಾನದಲ್ಲಿ ಏಕಾಗ್ರ ಮನಸ್ಸಿನ ಮೂಲಕ ನೋಡುತ್ತಾರೊ ಮತ್ತು ಯಾರ ಅಂತವನ್ನು ಸುರಾಸುರರು ಅರಿಯರೊ ಅಂಥ ದೇವನಿಗೆ ನಾವು ನಮಸ್ಕರಿಸುತ್ತೇವೆ."

### ಭಾಗವತ : ಜ್ಞಾನ-ಭಕ್ತಿ ಸಮನ್ವಯದ ಶ್ರೇಷ್ಠಗ್ರಂಥ

ಈ ಶ್ರೇಷ್ಠಗ್ರಂಥವು ಜ್ಞಾನ ಮತ್ತು ಭಕ್ತಿಗಳನ್ನು ಒಗ್ಗೂಡಿಸುತ್ತದೆ. ಜ್ಞಾನದಿಂದ ಕೂಡಿದ ಭಕ್ತಿಯು ಸಂಕುಚಿತ ಮತ್ತು ಮತೀಯ ಭಾವನೆಯಿಂದ ಮುಕ್ತವಾಗಿರುತ್ತದೆ. ಈ ಅದ್ವೈತಪರ ಭಕ್ತಿಯೇ ಈ ಗ್ರಂಥದಲ್ಲಿ ಹಾಸುಹೊಕ್ಕಾಗಿದೆ. ಇದರೊಂದಿಗೆ ಇನ್ನೊಂದು ಮೌಲ್ಯವನ್ನು ಸೇರಿಸಲಾಗಿದೆ, ಅದೇ ವೈರಾಗ್ಯ. ಈ ವೈರಾಗ್ಯಶಕ್ತಿಯಿಂದ ಹೊರಮೂಡುವ ನೈತಿಕ ಮತ್ತು ಮಾನವೀಯ ಮೌಲ್ಯಗಳು ಗ್ರಾಹಕ ಪ್ರವೃತ್ತಿಯ ಇಂದಿನ ಸಮಾಜವನ್ನು ಸಂರಕ್ಷಿಸಬಲ್ಲವು. ಇವು ನಮ್ಮಲ್ಲಿರುವ ಪ್ರಾಣಿ ಪ್ರವೃತ್ತಿಯನ್ನು ನಾಶಮಾಡಿ ಮನುಷ್ಯನನ್ನು ಉಳಿಸಬಲ್ಲವು. ಇದೇ ಭಾವನೆಯನ್ನೇ ಜೀವಶಾಸ್ತ್ರಜ್ಞ ಜೂಲಿಯನ್ ಹಕ್ಸ್ಲೆ ತಮ್ಮ *Evolution: A New Synthesis* ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.

ಭಕ್ತಿ ಮತ್ತು ಜ್ಞಾನ ಭಾರತದ ಶ್ರೇಷ್ಠ ಆಸ್ತಿ. ಅವು ಮಾನವ ಜೀವನದಲ್ಲಿ ಆನಂದವನ್ನು ತುಂಬಿ ಮಾದಕದ್ರವ್ಯ, ಮದ್ಯ ಮುಂತಾದ ಬಾಹ್ಯಪ್ರಚೋದಕಗಳ ಆಲಂಬನೆಯಿಂದ ತಪ್ಪಿಸುತ್ತವೆ. ಸುಖದ ಈ ಆಂತರಿಕ ಮೂಲವನ್ನು ಮರೆತಿರುವುದರಿಂದಾಗಿ ಹೆಚ್ಚು ಹೆಚ್ಚು ಜನರು ಮದ್ಯ ಮುಂತಾದ ಬಾಹ್ಯ 'ಕಿಕ್ಸ್'ಗಳಿಗೆ ವಶರಾಗಿದ್ದಾರೆ. ನಮ್ಮ ಜನರು ಮಾನವನ ನೈಜ ಸ್ವಭಾವವನ್ನೂ ಮಾನವವಿಕಾಸದ ದಿಕ್ಕನ್ನೂ ಅರ್ಥಮಾಡಿಕೊಂಡಾಗ ಈ ಪರಿಸ್ಥಿತಿ ಬದಲಾಗುತ್ತದೆ. ಈ ಆಧ್ಯಾತ್ಮಿಕ ಜಾಗೃತಿಗಾಗಿಯೇ ಶ್ರೀರಾಮಕೃಷ್ಣರ ಅವತಾರವಾಗಿರುವುದು.

ವೇದಾಂತವು ಮಾನವರು ಸುಖಿಗಳೂ ಮುಕ್ತರೂ ಆಗಿರಬೇಕೆಂದೂ ಪರಸುಖನಾಶಕರಾಗಿರಬಾರದೆಂದೂ ಬಯಸುತ್ತದೆ. ಆದರೆ ಆಂತರಿಕ ಸುಖವನ್ನು ಕಡೆಗಣಿಸಬಾರದೆಂದು ಅದು ಎಚ್ಚರಿಸುತ್ತದೆ. ಅದನ್ನು ಕಡೆಗಣಿಸಿದರೆ ಮಾನವನು ಪಶುಸಮಾನನಾಗುತ್ತಾನೆ, ಮುಕ್ತನಾಗುವುದಿಲ್ಲ. ಹೊರವಾತಾವರಣದಿಂದ ಹೆಚ್ಚು ಹೆಚ್ಚು ಸ್ವಾವಲಂಬನೆಯನ್ನು ಪಡೆಯುವುದೇ ಜೀವವಿಕಾಸದ ಮುಖ್ಯ ಪ್ರಕ್ರಿಯೆ ಎಂದು ಆಧುನಿಕ ಜೀವಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಶ್ರೀರಾಮಕೃಷ್ಣರು ಭಾಗವತವನ್ನು ತುಂಬ ಪ್ರೀತಿಸುತ್ತಿದ್ದರು. ಸ್ವಾಮಿ ಶಾರದಾನಂದರು ಶ್ರೀರಾಮಕೃಷ್ಣ ಲೀಲಾಪ್ರಸಂಗದಲ್ಲಿ ಪ್ರಸ್ತಾಪಿಸುತ್ತಾರೆ : ಶ್ರೀರಾಮಕೃಷ್ಣರು ಮಧುರಭಾವಸಾಧನೆಯಲ್ಲಿ ತೊಡಗಿರುವಾಗ ಒಮ್ಮೆ ಭಾಗವತ ಪಠನವನ್ನು ಕೇಳುತ್ತ ಅವರಿಗೆ ಭಾವಸಮಾಧಿ ಉಂಟಾಗಿ ಶ್ರೀಕೃಷ್ಣನ ದರ್ಶನವನ್ನು ಪಡೆಯುತ್ತಾರೆ. ಶ್ರೀಕೃಷ್ಣನ ಪಾದದಿಂದ ಒಂದು ಬೆಳಕಿನ ಕಿರಣವು ಹೊರಬಂದು ಮೊದಲು ಭಾಗವತವನ್ನೂ ಅನಂತರ ಅವರ ಹೃದಯವನ್ನೂ ಸ್ಪರ್ಶಿಸಿ, ಮೂರನ್ನೂ ಸ್ಪರ್ಶಿಸುತ್ತ ಸ್ವಲ್ಪಕಾಲ ಉಳಿಯಿತು. ಈ ದರ್ಶನದಿಂದ ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಾಣುವ ಈ ಮೂರೂ ವಸ್ತುತಃ ಒಂದೇ ಎಂಬ ನಂಬಿಕೆ ಅವರಲ್ಲಿ ಉಂಟಾಯಿತು. ಆದ್ದರಿಂದ ಅವರು ಹೇಳುತ್ತಿದ್ದರು, **"ಭಾಗವತ, ಭಕ್ತ ಮತ್ತು ಭಗವಾನ್—ಈ ಮೂರೂ ಒಂದೇ, ಒಂದರ ಮೂರು ರೂಪಗಳು,"** ಎಂದು.

ಭಾಗವತವು ಶ್ರೇಷ್ಠ ಶಾಸ್ತ್ರಗ್ರಂಥ. ಅದು ಭಾರತದಾದ್ಯಂತ ಜನಪ್ರಿಯವಾಗಿದೆ. ಆದರೆ ಅದರ ಬೋಧನೆಯ ಮೂಲಕ ನಮ್ಮ ಸಾಮಾಜಿಕ ಜೀವನದಲ್ಲಿ ಹೆಚ್ಚಿನ ಬದಲಾವಣೆ ಕಂಡು ಬರುವುದಿಲ್ಲ. ಭಾರತದಲ್ಲಿ ಆಧ್ಯಾತ್ಮಿಕ ಬೋಧನೆಗಳಿಗೆ ಬರಗಾಲವಿಲ್ಲ. ಆದರೆ ಸಾಮಾಜಿಕ ವ್ಯವಸ್ಥೆಯು ಸಂಪೂರ್ಣ ವೇದಾಂತ ವಿರೋಧಿಯೂ, ಉಪನಿಷತ್ ವಿರೋಧಿಯೂ ಗೀತಾವಿರೋಧಿಯೂ ಆಗಿದೆ. ಇದನ್ನು ಈಗ ಸರಿಪಡಿಸಬೇಕಾಗಿದೆ. ನಮ್ಮಲ್ಲಿ ಸಮಸ್ಯೆಗಳಿವೆ, ನಿಜ. ಉನ್ನತ ಸ್ಥಾನದಲ್ಲಿರುವವರಲ್ಲಿ ಸ್ವಲ್ಪ ತಿಳಿವಳಿಕೆ ಇದ್ದರೆ, ಸ್ವಲ್ಪವಾದರೂ ಆಧ್ಯಾತ್ಮಿಕತೆ ಅವರಲ್ಲಿದ್ದರೆ ಈ ಸಮಸ್ಯೆಗಳನ್ನು ಬಗೆಹರಿಸಬಹುದು. ಅಧ್ಯಾತ್ಮದಲ್ಲಿ, ಒಲವು ಮತ್ತು ದೇಶಪ್ರೇಮ ಇವು ನಮ್ಮ ಶೀಲದಲ್ಲಿ ಪರಿವರ್ತನೆಯನ್ನು ಉಂಟುಮಾಡುತ್ತವೆ. ಆದರೆ ಸ್ವಪ್ರೇಮ ನೈತಿಕ ಅವನತಿಯನ್ನು ಉಂಟುಮಾಡುತ್ತದೆ. ಸ್ವಾತಂತ್ರ್ಯಕ್ಕೆ ಮುಂಚೆ ಜನರು ದೇಶವನ್ನು ಪ್ರೀತಿಸಿದರು, ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದರು. ಸ್ವಾತಂತ್ರ್ಯಾನಂತರ ನಾವು ನಮ್ಮನ್ನು ಪ್ರೀತಿಸಲು ಪ್ರಾರಂಭಿಸಿದೆವು. ಇದರ ಪರಿಣಾಮವಾಗಿ ಭ್ರಷ್ಟಾಚಾರ ಪ್ರಾರಂಭವಾಯಿತು. ಇಂದು ಭಾರತದಲ್ಲಿ ಏನನ್ನು ನೋಡುತ್ತೇವೆ? ಪರಿಪೂರ್ಣ ಭ್ರಷ್ಟಾಚಾರವನ್ನು.

ಆದರೆ ಇದು ಬದಲಾಗುತ್ತದೆ. ಜನರು ಮುಂದೆ ಸತ್ಯವನ್ನು ಅರ್ಥಮಾಡಿಕೊಳ್ಳುತ್ತಾರೆ. ಸ್ವಾಮೀಜಿ ಭವಿಷ್ಯ ನುಡಿದಂತೆ ಭಾರತವು ಹಿಂದೆಂದಿಗಿಂತಲೂ ಶ್ರೇಷ್ಠ ರಾಷ್ಟ್ರವಾಗಿ ಮೆರೆಯುತ್ತದೆ ಎಂಬುದರಲ್ಲಿ ನನಗೆ ನಂಬಿಕೆ ಇದೆ. ಇಡೀ ಜಗತ್ತು ಆಧ್ಯಾತ್ಮಿಕ ಸ್ಫೂರ್ತಿಗಾಗಿ ಭಾರತದ ಕಡೆ ತಿರುಗುತ್ತದೆ.

### ಉಪಸಂಹಾರ

ಈ ಭಾಗವತಭಕ್ತಿ ಅಥವಾ ಶ್ರೀರಾಮಕೃಷ್ಣರು ಕರೆದ ನಾರದೀಯ ಭಕ್ತಿ, ಮುಂಬರುವ ಶತಮಾನಗಳಲ್ಲಿ, ಮಾನವಕೋಟಿಯ ಆಧ್ಯಾತ್ಮಿಕ ಜಾಗೃತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಪದ್ಮಪುರಾಣದಲ್ಲಿ ಬರುವ ಭಾಗವತ ಮಾಹಾತ್ಮ್ಯವೂ ಅಂತಹ ಆಧ್ಯಾತ್ಮಿಕ ಕ್ರಾಂತಿಯನ್ನು ಸೂಚಿಸುತ್ತದೆ. ಅದರ ಒಂದು ಶ್ಲೋಕದೊಂದಿಗೆ ನಾನು ಸಮಾಪ್ತಿಗೊಳಿಸುತ್ತೇನೆ:

**ಜ್ಞಾನವೈರಾಗ್ಯಸಂಯುಕ್ತಾ ಭಕ್ತಿಃ ಪ್ರೇಮರಸಾವಹಾ ।**
**ಪ್ರತಿಗೇಹಂ ಪ್ರತಿಜನಂ ತತಃ ಕ್ರೀಡಾಂ ಕರಿಷ್ಯತಿ ॥**

"ಪ್ರೇಮರಸದಿಂದ ಕೂಡಿದ, ಜ್ಞಾನವೈರಾಗ್ಯಗಳಿಂದ ಶಕ್ತಿಯುತವಾದ ಭಕ್ತಿಯು ಎಲ್ಲರ ಮನೆಯಲ್ಲಿಯೂ ಎಲ್ಲರ ಹೃದಯದಲ್ಲಿಯೂ ಕ್ರೀಡಿಸುತ್ತದೆ."